ಶ್ರೀ

# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಕೆ. ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 488 (382)

ಉತ್ತರ ದಿನಾಂಕ : 11.12.2020

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸರಿ ಸುಮಾರು 8 ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಯಚೂರು, ಬಳ್ಳಾರಿ, ತುಮಕೂರು, ಮಂಡ್ಯ, ಕಲಬುರಗಿ ಮತ್ತು ಕೋಲಾರ ಜಿಲ್ಲೆಗಳ ಕೆಲವು ಗ್ರಾಮಗಳಲ್ಲಿ ಲಭ್ಯವಿರುವ ನೀರಿನಲ್ಲಿ ಯುರೇನಿಯಂ ಮಿತಿ ಮೀರಿದ ಪ್ರಮಾಣವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭಾರತ ಸರ್ಕಾರದ ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯದ ಜಲ ಜೀವನ್ ಮಿಷನ್‌ನ ಮಾರ್ಗಸೂಚಿ ಪ್ರಕಾರ ಕುಡಿಯುವ ನೀರಿನ pH, Total dissolved solids, Turbidity, Chloride, Total alkalinity, Total Hardness, Sulphate, Iron, Total arsenic (hotspot area), Fluoride, Nitrate, Total coliform ಮತ್ತು E-Coli ಸೇರಿದಂತೆ ಒಟ್ಟು 13 ನಿಯತಾಂಕಗಳ (Parameter) ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳುವುದಾಗಿರುತ್ತದೆ. ಜಲಮೂಲಗಳಲ್ಲಿ ಯುರೇನಿಯಂ ಅಂಶವಿರುವುದನ್ನು ಪರೀಕ್ಷೆಗೊಳಪಡಿಸಿರುವುದಿಲ್ಲ. |
| ಆ) | ಕುಡಿಯುವ ನೀರಿನಲ್ಲಿ 30 ಮೈಕ್ರೋಗ್ರಾಂಗಿಂತ ಕಡಿಮೆ ಯುರೇನಿಯಂ ಅಂಶ ಇರಬೇಕೆಂದು ವಿಶ್ವಸಂಸ್ಥೆ ನಿಗದಿಪಡಿಸಿದ್ದು, ಈ ಜಿಲ್ಲೆಗಳ ಕೆಲವು ಗ್ರಾಮಗಳಲ್ಲಿ ನೀರಿನಲ್ಲಿ ಈ ಮಿತಿಗಿಂತ ಹೆಚ್ಚಾಗಿದ್ದು, ಇದು ಕುಡಿಯಲು ಯೋಗ್ಯವಲ್ಲದೇ ನೀರು ಸೇವಿಸುವವರಿಗೆ ಕಿಡ್ನಿ ತೊಂದರೆ, ಕ್ಯಾನ್ಸರ್, ಮೂಳೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಕರುಳಿನ ತೊಂದರೆಗಳು ಕಾಣಿಸಿಕೊಳ್ಳುವುದು ನಿಜವೇ; | - ಅನ್ವಯಿಸುವುದಿಲ್ಲ - |
| ಇ) | ಈ ಸಮಸ್ಯೆಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ಒದಗಿಸುವುದು) | - ಅನ್ವಯಿಸುವುದಿಲ್ಲ - |

ಸಂ:ಗ್ರಾಕುನೀ&ನೈಇ/120/ಗ್ರಾನೀಸ(4)2020

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

**ಕೆ.ಎಸ್. ಈಶ್ವರಪ್ಪ**
**ಗ್ರಾಮೀಣಾಭಿವೃದ್ಧಿ ಮತ್ತು**
**ಪಂಚಾಯತ್ ರಾಜ್ ಸಚಿವರು**